# ದಾರಿ ಮತ್ತು ಗುರಿ

ಯಾವುದೇ ಗುರಿಯನ್ನು ತಲುಪಬೇಕಾದರೆ ಒಂದು ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಗುರಿಯತ್ತ ಹೊರಟಿರುವಾತ ತಾನು ಕ್ರಮಿಸಬೇಕಾದ ದಾರಿಯನ್ನು ಮೊದಲೇ ನಿರ್ಧರಿಸಿಕೊಂಡು ಇರಬೇಕಾದುದು ಅಗತ್ಯ. ಒಂದು ನಿರ್ದಿಷ್ಟ ಸ್ಥಳಕ್ಕೆ ಹೋಗಬೇಕಾಗಿರುವಾತ, ಅಲ್ಲಿಗೆ ಹೋಗಬಹುದಾದ ಮಾರ್ಗಗಳನ್ನು ಕುರಿತು ಯೋಚಿಸುವುದು ಒಂದು ಸಹಜ ಕ್ರಿಯೆ. ಆ ಜಾಗವನ್ನು ತಲುಪಲು ಅನೇಕ ದಾರಿಗಳಿರಬಹುದು. ಅವುಗಳಲ್ಲಿ ಕೆಲವು ಬಳಸು ದಾರಿಗಳು; ಇನ್ನು ಕೆಲವು ದುರ್ಗಮ ದಾರಿಗಳು; ಮತ್ತೆ ಕೆಲವು ಸ್ವಲ್ಪ ಬಳಸಾಗಿದ್ದರೂ ಪ್ರಯಾಣಕ್ಕೆ ಯೋಗ್ಯವಾದಂಥವು. ಪ್ರಯಾಣಿಕ ಈ ಎಲ್ಲ ಅಂಶಗಳನ್ನೂ ಮನಸ್ಸಿಗೆ ತಂದುಕೊಂಡು, ತನಗೆ ಅನುಕೂಲವಾದ ದಾರಿಯನ್ನು ಆರಿಸಿಕೊಂಡು ಗಮ್ಯಸ್ಥಾನವನ್ನು ಸೇರುತ್ತಾನೆ. ಇದು ನಮ್ಮೆಲ್ಲರ ನಿತ್ಯ ಜೀವನದಲ್ಲಿನ ಸಾಮಾನ್ಯ ಸಂಗತಿ.

ಇದೇ ತತ್ವವನ್ನು ನಮ್ಮ ಬದುಕಿನ ಪಯಣದಲ್ಲೂ ಅಳವಡಿಸಿಕೊಳ್ಳಬೇಕಾಗುತ್ತದೆ. ಗುರಿಮುಟ್ಟಿದರಷ್ಟೇ ಸಾಕು, ದಾರಿ ಯಾವುದಾದರೂ ಸರಿಯೇ– ಎಂಬ ಧೋರಣೆ ಸರಿಯಲ್ಲ. ಒಬ್ಬಾತ ಸಾಕಷ್ಟು ಹಣಗಳಿಸಿ, ಬದುಕಿನ ಸುಖ ಸವಲತ್ತುಗಳನ್ನು ಅನುಭವಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದಾನೆಂದು ಭಾವಿಸೋಣ. ಆತ ತನ್ನ ಗುರಿಯನ್ನು ಸಾಧಿಸಲು ಅನೇಕ ಮಾರ್ಗಗಳನ್ನು ಅನುಸರಿಸಬಹುದಲ್ಲವೆ? ತಾನು ಪಡೆದಿರುವ ಶಿಕ್ಷಣದ ಸಹಾಯದಿಂದಲೋ, ತನ್ನಲ್ಲಿರುವ ಪ್ರತಿಭೆ, ಕೌಶಲಗಳ ಬಲದಿಂದಲೋ ಆತ ಧನಿಕನಾಗಬಹುದು; ದೈಹಿಕ ಸಾಮರ್ಥ್ಯವನ್ನು ಬಳಸಿಕೊಂಡು ಶ್ರದ್ಧೆಯಿಂದ ದುಡಿದು, ಹಣ ಗಳಿಸಬಹುದು, ಇವೆರಡೂ ನ್ಯಾಯದ ಮಾರ್ಗಗಳು, ಅವುಗಳ ಹಿಂದೆ ನೈತಿಕ ಬಲವಿದೆ. ಇಂಥ ದಾರಿಗಳ ಮೂಲಕ ತಲುಪಿದ ಗುರಿ ವ್ಯಕ್ತಿಯ ಪಾಲಿಗೆ ಘನತೆಯನ್ನು ತಂದುಕೊಡುತ್ತದೆ, ಈ ದಾರಿಗಳನ್ನು ಆಯ್ಕೆ ಮಾಡಿಕೊಳ್ಳದೆ ಅನ್ಯಾಯ, ಹಿಂಸೆ, ವಂಚನೆ– ಮುಂತಾದ ವಾಮ ಮಾರ್ಗಗಳನ್ನು ಹಿಡಿದು ಶ್ರೀಮಂತರಾಗುವರು ಸಾಕಷ್ಟು ಮಂದಿ ಇದ್ದಾರೆ. ಆದರೆ ಅವರು ತಲುಪಿದ ಗುರಿ ಅವರನ್ನು ಎತ್ತರಕ್ಕೇರಿಸುವುದಿಲ್ಲ ಎಂಬುದಂತೂ ಸತ್ಯ.

ಸಾಮಾನ್ಯರಾದ ನಾವು ಗುರಿ ಎಂಬುದಷ್ಟೇ ಮಹತ್ವದ್ದು, ಅದನ್ನು ಸೇರುವ ದಾರಿ ಮುಖ್ಯವಲ್ಲವೆಂದು ಭಾವಿಸುತ್ತೇವೆ. ಆದರೆ ಗಾಂಧೀಜೀಯವರ ದೃಷ್ಟಿಯಲ್ಲಿ ದಾರಿಯೆಂಬುದು ಗುರಿಯಷ್ಟೇ ಮುಖ್ಯ. ಅವರ ಪ್ರಕಾರ ಮಾರ್ಗ ಮತ್ತು ಗುರಿ ಪರಸ್ಪರ ಪರಿವರ್ತನೀಯ ಪದಗಳು. 'ಬೀಜಕ್ಕೂ ಮರಕ್ಕೂ ನಡುವೆ ಸಂಬಂಧ ಇರುವಂತೆಯೇ ದಾರಿಗೂ ಗುರಿಗೂ ನಡುವೆ ಅನುಲ್ಲಂಘನೀಯ ಸಂಬಂಧವಿದೆ' ಎಂಬುದು ಗಾಂಧೀಜಿಯ ಖಚಿತ ಅಭಿಪ್ರಾಯ, ಆದ್ದರಿಂದಲೇ ಅವರು– 'ಒಳ್ಳೆಯ ಗುರಿ ತಲುಪಬೇಕಾದರೆ ದಾರಿ ಕೂಡ ಒಳ್ಳೆಯದೇ ಆಗಿರಬೇಕು... ಅಶುದ್ಧ ಮಾರ್ಗದ ಫಲ ಅಶುದ್ಧ ಗುರಿ. ಸುಳ್ಳಿನಿಂದ ಸತ್ಯವನ್ನು ಸೇರಲಾಗುವುದಿಲ್ಲ... ಅನೈತಿಕ ಮಾರ್ಗ ಹಿಡಿದು ಶ್ರೇಷ್ಠವಾದ ಫಲವನ್ನು ಪಡೆಯುವುದು ಅಸಾಧ್ಯ' ಎನ್ನುತ್ತಿದ್ದರು. 'Means justifies the end' ಎಂಬುದು ಗಾಂಧೀಜೀಯವರ ಪ್ರಸಿದ್ಧ ಹೇಳಿಕೆ.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಸತ್ಯ, ಅಹಿಂಸೆಗಳ ಬೆಂಬಲವಿರುವ ಸತ್ಯಾಗ್ರಹವೆಂಬ ದಾರಿಯನ್ನು ಗಾಂಧೀಜಿ ಆಯ್ಕೆ ಮಾಡಿಕೊಂಡದ್ದು ಈ ಕಾರಣದಿಂದಲೇ. ಸ್ವಾತಂತ್ರ್ಯವೆಂಬ ಗುರಿ ಮುಟ್ಟಲು ಹಿಂಸೆಯ ಹಾಗೂ ಅಸತ್ಯದ ದಾರಿಯನ್ನು ಅವರು ಪ್ರಜ್ಞಾಪೂರ್ವಕ ದೂರವಿಟ್ಟರು. 'ಖಡ್ಗದಿಂದ ಸಂಪಾದಿಸಿದ್ದು ಖಡ್ಗದಿಂದಲೇ ನಾಶವಾಗುತ್ತದೆ' ಎಂಬ ಅರಿವು ಅವರಿಗಿತ್ತು. ಅಸತ್ಯ ಹಾಗೂ ಹಿಂಸೆಗಳಿಂದ ಶಾಶ್ವತ ಒಳಿತನ್ನು ಗಳಿಸಲು ಸಾಧ್ಯವಿಲ್ಲ ಎಂಬುದನ್ನು ಅವರು ದೃಢವಾಗಿ ಪ್ರತಿಪಾದಿಸುತ್ತಿದ್ದರು, ಸತ್ಯ ಅಹಿಂಸೆಗಳ ಹಾದಿಯಲ್ಲಿ ಪ್ರೇಮ ಸಮಾನತೆಗಳ ತಂಪು ನೆರಳು ಇರುವುದನ್ನು ಅವರು ಕಂಡುಕೊಂಡಿದ್ದರು. ಶುದ್ಧ ದಾರಿಯಲ್ಲಿ ನಡೆದು ಗಳಿಸಿದ ಸ್ವಾತಂತ್ರ್ಯ ಪರಿಶುದ್ಧವಾಗಿ ಇರಬಲ್ಲುದು ಎಂಬುದು ಅವರ ಸಿದ್ಧಾಂತವಾಗಿತ್ತು. ವೈಯಕ್ತಿಕ ಬದುಕಿನಲ್ಲೂ ದಾರಿ ಮತ್ತು ಗುರಿಗಳೆರಡರ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವ ವ್ರತ ನಿಷ್ಠೆ ಅವರಲ್ಲಿತ್ತು. ಆದ್ದರಿಂದ ಅವರ ನಾಯಕತ್ವಕ್ಕೆ ಅಷ್ಟೊಂದು ಶಕ್ತಿ ಒದಗಿಬರಲು ಸಾಧ್ಯವಾದುದು.

ಆದರೆ ಸ್ವಾತಂತ್ರ್ಯೋತ್ತರ ಭಾರತ ದಾರಿ ಮತ್ತು ಗುರಿಗಳೆರಡರ ಪಾವಿತ್ರ್ಯ ಪರಿಕಲ್ಪನೆಯನ್ನು ಗಾಳಿಗೆ ತೂರಿರುವುದು ಮಾತ್ರ ಬಹುದೊಡ್ಡ ವಿಪರ್ಯಾಸ!

■ **ವೈನತೇಯ**

## ಮಾತೇ ಮುತ್ತು

★ ವಿಚಾರ ಎನ್ನುವುದು ಹಳೆಯದಾಗಿರಲಿ ಅಥವಾ ಹೊಸದಾಗಿರಲಿ ಅದು ಮುಖ್ಯವಲ್ಲ. ಅದನ್ನು ಎಷ್ಟು ಚೆನ್ನಾಗಿ ಮಂಡಿಸುತ್ತಾನೆ ಎನ್ನುವುದು ಮುಖ್ಯ.
-ಇಂದಿರಾ ಗಾಂಧಿ

★ ಜ್ಞಾನಿಯನ್ನು ಸುಖಿಯನ್ನಾಗಿಸಲು ಯಾವುದೇ ವಸ್ತುವಿನ ಅಗತ್ಯವಿರುವುದಿಲ್ಲ. ಆದರೆ ಮೂರ್ಖನಿಗೆ ಯಾವುದೇ ವಸ್ತುವಿನಿಂದ ಸಂತೋಷವಾಗುವುದಿಲ್ಲ. ಆದ್ದರಿಂದಲೇ ಈ ಜಗತ್ತಿನಲ್ಲಿ ದುಃಖಿಗಳ ಸಂಖ್ಯೆ ಹೆಚ್ಚು ಇರುವುದು.
-ಆನಂದಕಂದ

★ ನಮ್ಮ ಜೀವನದಲ್ಲಿ ಪ್ರತಿಯೊಂದು ಕ್ಷಣವೂ ಪ್ರಶಸ್ತವಾದದ್ದು. ಸೋಮಾರಿತನದಿಂದ, ಬೇಜವಾಬ್ದಾರಿತನದಿಂದ ಅದನ್ನು ಹಾಳು ಮಾಡಬಾರದು.
-ವಿನೋಬಾ ಭಾವೆ

★ ನೀನು ಬೇಕೆಂದೇ ಮೊದಲು ಮನುಷ್ಯನನ್ನು ಕಂದಕದಲ್ಲಿ ತಳ್ಳುತ್ತೀಯೆ. ಅನಂತರ ಹೇಳುತ್ತೀಯೆ: 'ದೇವರು ನಿನ್ನನ್ನು ಹೇಗೆ ಇಟ್ಟಿದ್ದಾನೆ, ಹಾಗೆಯೇ ಸುಖವಾಗಿರು!'
-ರಾಮಾನುಜಾಚಾರ್ಯ

★ ನಿಂದೆ ಮತ್ತು ನಿದ್ದೆಯಿಂದ ಎಷ್ಟು ದೂರವಿದ್ದರೂ ಅಷ್ಟು ಒಳ್ಳೆಯದು.
-ಮುನಿಶ್ರೀ ತರುಣಸಾಗರಜೀ

★ ಭಿನ್ನಾಭಿಪ್ರಾಯಕ್ಕೆ ತಲುಕು ಹಾಕಿ ಸ್ನೇಹಿತರನ್ನು ಕಳೆದುಕೊಳ್ಳುವುದು ಸರಿಯಲ್ಲ.
-ಚದುರಂಗ

★ ನಿಮಗೆ ತಡೆದುಕೊಳ್ಳಲು ಆಗದಿರುವಂಥ ಸಿಟ್ಟು ಬಂದರೆ ಸಿಟ್ಟನ್ನು ಹೊರಹಾಕಿ. ಆದರೆ ಅಂಥ ಸಂದರ್ಭದಲ್ಲಿ ಯಾವುದೇ ನಿರ್ಧಾರಗಳನ್ನು ಕೈಗೊಳ್ಳಬೇಡಿ. ಅಂಥ ನಿರ್ಧಾರದಿಂದ ನಿಮಗೇ ತೊಡಕಾಗಬಹುದು.
-ಬೇಕನ್

★ ಮನುಷ್ಯ ಒಂದು ರಥ ಇದ್ದಂತೆ. ಬುದ್ಧಿ ರಥದ ಸಾರಥಿ, ಮನಸ್ಸು ರಥದ ಲಗಾಮು, ಇಂದ್ರಿಯಗಳು ರಥದ ಕುದುರೆಗಳು. ಅವು ಎಲ್ಲಿ ಕರೆದೊಯ್ಯುತ್ತವೆಯೋ ಅಲ್ಲಿ ಹೋಗಬೇಕಾಗುತ್ತದೆ.
-ಕಠೋಪನಿಷತ್ತು

★ ಜೀವನದಲ್ಲಿ ಇಂಥದೊಂದು ಸಂದರ್ಭ ಬರುತ್ತದೆ– ಯಾರೂ ನಮ್ಮೊಂದಿಗೆ ಇರುವುದಿಲ್ಲ. ಕೈಹಿಡಿದ ಪತ್ನಿಯಷ್ಟೇ ಅಲ್ಲ, ನಮ್ಮ ನಾಡಿಯೂ ನಮ್ಮನ್ನು ಬಿಟ್ಟು ಹೋಗುತ್ತದೆ.
-ಕಬೀರ್

★ ಒಂದು ಧರ್ಮ ಇನ್ನೊಂದು ಧರ್ಮಕ್ಕೆ ಬಾಧಕ ಎನಿಸಿದರೆ ಅದು ಧರ್ಮ ಅಲ್ಲ, ಅದು ಕುಧರ್ಮ. ಯಾವುದೇ ಧರ್ಮವನ್ನು ವಿರೋಧಿಸದೇ ಇರುವುದೇ ನಿಜವಾದ ಧರ್ಮ.
-ಮಹಾಭಾರತ

★ ಇಡೀ ಜಗತ್ತು ಆನಂದಕ್ಕಾಗಿ ತಪ್ಪು ದಾರಿಯಲ್ಲಿ ಓಡುತ್ತಿದೆ. ಸಂಗ್ರಹಿಸುವುದರಿಂದ ಆನಂದ ಸಿಕ್ಕುತ್ತದೆ ಎಂಬುದು ತಪ್ಪು. ತ್ಯಾಗದಲ್ಲಿ ಆನಂದವಿದೆ.
-ಹೆನ್ರಿ ಡ್ರೈಮಂಡ್

★ ನಾನು ಬಾತುಕೋಳಿಗೆ ಗುರಿ ಇಡುವುದಕ್ಕಿಂತ ಅದರ ಹಾರಾಟದ ಚೆಂದವನ್ನು ನೋಡಲು ಇಷ್ಟಪಡುತ್ತೇನೆ. ಬುಲ್ ಬುಲ್ ಪಕ್ಷಿಯನ್ನು ತಿನ್ನುವುದಕ್ಕಿಂತ ಅದರ ಸುಮಧುರ ಗಾನವನ್ನು ಕೇಳಬಯಸುತ್ತೇನೆ.
-ಜಾನ್ ರಸ್ಕಿನ್